# ಸಂಪಾದಕೀಯ

# ನೈತಿಕ ಚಿಂತನೆ

ನೀತಿಶಾಸ್ತ್ರ ಅಥವಾ ನೈತಿಕತೆಯನ್ನು ಮಾನವನ ನಡತೆಗೆ ಸಂಬಂಧಿಸಿದ ಪ್ರಮಾಣಕಶಾಸ್ತ್ರ (*normative science*) ಎಂದು ಕರೆಯಲಾಗಿದೆ. ಬಾಹ್ಯವಸ್ತುಗಳ ಅಧ್ಯಯನಕ್ಕೆ ಸಂಬಂಧಿಸಿದ ವಿಜ್ಞಾನವನ್ನು ವಾಸ್ತವಶಾಸ್ತ್ರ (positive science) ಎಂದು ಕರೆಯುತ್ತಾರೆ. ಇಲ್ಲಿ ನೈತಿಕ ನಿರ್ಣಯಕ್ಕೆ ಅವಕಾಶವಿಲ್ಲ. ಒಬ್ಬ ವಿಜ್ಞಾನಿ ಪ್ರಯೋಗಶಾಲೆಯಲ್ಲಿ ವಸ್ತುಗಳೊಡನೆ ವ್ಯವಹರಿಸುತ್ತಿರುವಾಗ ವಸ್ತುಗಳು ಒಳ್ಳೆಯವೇ ಕೆಟ್ಟವೇ, ಸುಂದರವೇ ಕುರೂಪವೇ ಎಂದು ನಿರ್ಣಯಿಸುವುದಕ್ಕೆ ಹೋಗುವುದಿಲ್ಲ. ಅಂತಹ ನಿರ್ಣಯಗಳಿಗೆ ಅಲ್ಲಿ ಅವಕಾಶವೇ ಇಲ್ಲ. ಮನುಷ್ಯನ ವಿಷಯದಲ್ಲಿ ಮಾತ್ರ ಈ ರೀತಿಯ ನಿರ್ಣಯಗಳು ಹೊಂದುತ್ತವೆ. ಮನುಷ್ಯನ ನಡತೆಗೆ ಸಂಬಂಧಿಸಿದಂತೆ ಯಾವುದು ಸರಿ ಅಥವಾ ಒಳಿತು ಎಂಬ ಅಧ್ಯಯನವನ್ನು ನೀತಿಶಾಸ್ತ್ರ ಎಂದು ಕರೆಯುತ್ತಾರೆ.

ಮನುಷ್ಯನನ್ನು ನೈತಿಕಜೀವಿ ಎಂದು ಕರೆಯಲಾಗಿದೆ. ಕಾರಣ, ಇತರ ಪ್ರಾಣಿಗಳಂತಲ್ಲದೆ, ಮನುಷ್ಯನಿಗೆ ಸ್ವಪ್ರಜ್ಞೆ ಇರುವುದರಿಂದ ಸರಿ-ತಪ್ಪು, ಒಳಿತು-ಕೆಡುಕು, ಪಾಪ-ಪುಣ್ಯ ಮುಂತಾದುವುಗಳನ್ನು ಕುರಿತು ವಿಚಾರ ಮಾಡಬಲ್ಲ ಮತ್ತು ಇದರಿಂದಾಗಿ ಅವನಿಗೆ ನೈತಿಕ ನಿರ್ಣಯ ಸಾಧ್ಯ. ಪ್ರಾಣಿಗಳ ಕಾರ್ಯಗಳಿಗೆ ಸಂಬಂಧಿಸಿದಂತೆ ನಾವು ನೈತಿಕ ನಿರ್ಣಯ ನೀಡುವುದಿಲ್ಲ. ಈ ನೈತಿಕ ನಿರ್ಣಯ ಮಾನವನ ಕರ್ಮಗಳಿಗೆ ಮಾತ್ರ ಸಂಬಂಧಿಸಿದುದು. ಅವನಿಗೆ ಈ ನೈತಿಕ ಪ್ರಜ್ಞೆ ಇರುವುದರಿಂದಲೇ ಒಂದು ಕರ್ಮವನ್ನು ಮಾಡಲು, ಮಾಡದೆ ಇರಲು ಮತ್ತು ಬೇರೆ ರೀತಿಯಲ್ಲಿ ಮಾಡಲು (**ಕರ್ತುಮ್ ಅಕರ್ತುಮ್ ಅನ್ಯಥಾಕರ್ತುಂ**) ಸಾಧ್ಯ. ಈ ನೈತಿಕಪ್ರಜ್ಞೆ ಮನುಷ್ಯತ್ವದ ಅತ್ಯಂತ ಮುಖ್ಯ ಲಕ್ಷಣ.

> **ಭಯವೇ ದುಃಖವನ್ನು ಉಂಟುಮಾಡುತ್ತದೆ, ಭಯವೇ ಸಾವಿಗೆ ಕಾರಣ, ಭಯವೇ ಎಲ್ಲ ಕೆಡುಕಿನ ಉಗಮಸ್ಥಾನ**
>
> *—ಸ್ವಾಮಿ ವಿವೇಕಾನಂದ.*

ಇಂದಿನ ಧಾವಂತ ಸಾಮಾಜಿಕ ಸನ್ನಿವೇಶದಲ್ಲಿ ಮಾನವನು ಈ ನೈತಿಕ ಪ್ರಜ್ಞೆಯನ್ನು ಹೆಚ್ಚು ಹೆಚ್ಚು ಕಳೆದುಕೊಳ್ಳುತ್ತಿರುವಂತೆ ಕಂಡುಬರುತ್ತಿದೆ. ನಾವು ನಡೆದುಕೊಂಡು ಹೋಗುವಾಗ ಎಡವುವುದು ಕಡಿಮೆ. ಆದರೆ ವೇಗವಾಗಿ ಓಡುವಾಗ ಎಡವುವ ಮತ್ತು ಬೀಳುವ ಸಾಧ್ಯತೆ ಅಧಿಕ. ನಾವು ಅಸಂಖ್ಯ ಸಾಮಾಜಿಕ ವ್ಯವಹಾರಗಳಲ್ಲಿ ನಮ್ಮನ್ನು ತೊಡಗಿಸಿಕೊಂಡು ನಿರಂತರವಾಗಿ ಓಡುತ್ತಿರುವುದರಿಂದ ಸ್ವಪ್ರಜ್ಞೆಯನ್ನು ಕಳೆದುಕೊಳ್ಳುತ್ತೇವೆ. ನಮ್ಮ ಬಗ್ಗೆ, ನಮ್ಮ ಆದರ್ಶದ ಬಗ್ಗೆ ಆಲೋಚಿಸುವ, ನಮ್ಮನ್ನು ನಾವು ಅರಿಯುವ ಪ್ರಯತ್ನವನ್ನೇ ಮಾಡುವುದಿಲ್ಲ. ಇದರಿಂದ ನಾವು ನೈತಿಕ ವಿಷಯದಲ್ಲಿ ರಾಜಿ ಮಾಡಿಕೊಳ್ಳುತ್ತಾ ಹೋಗುತ್ತೇವೆ. ಹೀಗೆ ಕ್ರಮೇಣ ನೈತಿಕತೆಯಿಂದ ದೂರವಾಗುತ್ತೇವೆ. ನಮ್ಮ ಎಲ್ಲ ವ್ಯವಹಾರಗಳ ನಡುವೆಯೂ ನಮ್ಮ ಸ್ವಪ್ರಜ್ಞೆಯನ್ನು ಉಳಿಸಿಕೊಳ್ಳುವುದು ಅತ್ಯಂತ ಆವಶ್ಯಕ.

## ಭಯ ನೈತಿಕತೆಯ ಮೂಲವೇ ?

ನಿಜವಾದ ನೈತಿಕ ತಳಹದಿ ಯಾವುದು? ನಾವು ಏಕೆ ನೀತಿವಂತರಾಗಿರಬೇಕು? ಇಂತಹ ಮೂಲಭೂತ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಅನೇಕ ಸಿದ್ಧಾಂತಗಳಿವೆ. ಕೆಲವರ ಪ್ರಕಾರ ನೈತಿಕತೆ ಎಂಬುದು ಭಗವಂತನ ಆಣತಿ. ದೇವರೇ ನಾವು ನೀತಿವಂತರಾಗಿರಬೇಕೆಂದು ಆಜ್ಞಾಪಿಸಿರುವನು. ಅವನ ಆಜ್ಞೆಯನ್ನು ಮೀರಿದರೆ ನಾವು ಅವನ ಕೋಪಕ್ಕೆ ಒಳಗಾಗಿ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಅನೇಕ ಬಗೆಯ ಮಾರಕ ರೋಗಗಳು, ನರಕವಾಸ ಮುಂತಾದುವುಗಳು ಅವನು ನಮ್ಮ ತಪ್ಪಿಗೆ ನೀಡುವ ಶಿಕ್ಷಾ ವಿಧಾನಗಳು. ಈ ಸಿದ್ಧಾಂತ ಯಹೂದ್ಯ-ಕ್ರೈಸ್ತ ಸಂಪ್ರದಾಯದಲ್ಲಿ ಹೆಚ್ಚು ಪ್ರಚಲಿತ. ನಾವು ಬೈಬಲ್‌ನಲ್ಲಿ ಹತ್ತು ಆಜ್ಞೆ (*Ten Commandments*)ಗಳ ಬಗ್ಗೆ ಓದುತ್ತೇವೆ. ಇಲ್ಲಿ ನೈತಿಕತೆ ಭಯವನ್ನು ಅವಲಂಬಿಸಿದೆ. ದೇವರು ಒಬ್ಬ ಪೋಲಿಸ್‌ನವನಿದ್ದಂತೆ ಮತ್ತು ಜೈಲಿನ ಬದಲು ನರಕವಿದೆ. ಈ ಸಿದ್ಧಾಂತ ಮಾನವನ ಉದಾತ್ತ ಸ್ವಭಾವವನ್ನು ತಿರಸ್ಕರಿಸುತ್ತದೆ.

ಇನ್ನೊಂದು ಕರ್ಮಸಿದ್ಧಾಂತ—ಬಿತ್ತಿದಂತೆ ಬೆಳೆ. ನಾವು ಮಾಡುವ ಯಾವುದೇ ಕಾರ್ಯವೂ—ಭೌತಿಕವಾಗಲಿ, ವಾಚಿಕವಾಗಲಿ, ಮಾನಸಿಕವಾಗಲಿ—ವ್ಯರ್ಥವಾಗಿ ಹೋಗು

ವುದಿಲ್ಲ, ಅದು ತನ್ನ ಒಂದು ಸಂಸ್ಕಾರವನ್ನು ಬಿಟ್ಟುಹೋಗುತ್ತದೆ. ಆ ಸಂಸ್ಕಾರ ನಮಗೆ ಒಂದಲ್ಲ ಒಂದು ರೂಪದಲ್ಲಿ ಪ್ರತಿಫಲವನ್ನು ನೀಡುತ್ತದೆ. ನಾವು ಒಳ್ಳೆಯದನ್ನೋ ಕೆಟ್ಟದ್ದನ್ನೋ ಮಾಡಿದರೆ ಅದರ ಸತ್ ಅಥವಾ ದುಷ್ಪರಿಣಾಮದಿಂದ ನಾವು ತಪ್ಪಿಸಿಕೊಳ್ಳಲಾರೆವು. ನಾವು ತಪ್ಪನ್ನು ಮಾಡಿ ಪೋಲೀಸರಿಂದ ತಪ್ಪಿಸಿಕೊಳ್ಳಬಹುದು, ರಾಜನಿಂದ ಅಥವಾ ಸರ್ಕಾರದಿಂದ ತಪ್ಪಿಸಿಕೊಳ್ಳಬಹುದು, ದೇವರಿಂದಲೂ ತಪ್ಪಿಸಿಕೊಳ್ಳಬಹುದೇನೊ! ಆದರೆ ಈ ಕರ್ಮನಿಯಮದಿಂದ ತಪ್ಪಿಸಿಕೊಳ್ಳಲಾರೆವು. ನಾವು ಈಗ ಏನಾಗಿರುವೆವೊ ಮತ್ತು ಏನೇನು ಸುಖದುಃಖಗಳನ್ನು ಅನುಭವಿಸುತ್ತಿರುವೆವೊ ಅವೆಲ್ಲವೂ ನಮ್ಮ ಹಿಂದಿನ ಕರ್ಮದ ಫಲ. ಈ ನಿಯಮ ನಮ್ಮನ್ನು ನೀತಿವಂತರಾಗಿರಲು ಒತ್ತಾಯಿಸುತ್ತದೆ. ವ್ಯಕ್ತಿಯು ತನಗೆ ತಾನೇ ಜವಾಬ್ದಾರ ಎಂಬುದನ್ನು ಈ ಸಿದ್ಧಾಂತ ಒತ್ತಿ ಹೇಳುತ್ತದೆ. ಆದರೆ ಇಲ್ಲಿಯೂ ಮುಂದೆ ಒದಗಬಹುದಾದ ದುಃಖದ ಭಯ, ನೈತಿಕತೆಯ ಹಿಂದೆ ಕೆಲಸ ಮಾಡುವುದನ್ನು ನೋಡುತ್ತೇವೆ.

**ನೀತಿ ಎಂಬುದು ಕೇವಲ ಸಾಮಾಜಿಕ ಹೊಂದಾಣಿಕೆಯೆ?**

ಇನ್ನೊಂದು ಸಿದ್ಧಾಂತದ ಪ್ರಕಾರ ನೈತಿಕತೆ ಒಂದು ಸಾಮಾಜಿಕ ಹೊಂದಾಣಿಕೆ. ಸಮಾಜ ಸುವ್ಯವಸ್ಥಿತವಾಗಿರಬೇಕಾದರೆ ಎಲ್ಲ ವ್ಯಕ್ತಿಗಳು ಒಂದು ನೀತಿಬದ್ಧ ಜೀವನವನ್ನು ನಡೆಸುವುದು ಆವಶ್ಯಕ. ಎಲ್ಲರೂ ಸುಳ್ಳುಹೇಳುವುದು, ಕದಿಯುವುದು, ವಂಚಿಸುವುದು ಇತ್ಯಾದಿಗಳಲ್ಲಿ ತೊಡಗಿದರೆ ಸಮಾಜ ಸುಭದ್ರವಾಗಿ ಉಳಿಯುವುದಿಲ್ಲ, ಮತ್ತು ಸಮಾಜದಲ್ಲಿ ಯಾರೂ ನೆಮ್ಮದಿಯಿಂದ ಇರಲು ಆಗುವುದಿಲ್ಲ. ಇಲ್ಲಿ ಒಟ್ಟು ಸಮಾಜದ ಹಿತವೇ ಮುಖ್ಯ ಮತ್ತು ವ್ಯಕ್ತಿ ಗೌಣ. ಆದರೆ ವ್ಯಕ್ತಿಯ ಪರಿವರ್ತನೆಯಾಗದೆ ಅವನು ಬಹಳ ಕಾಲ ನೈತಿಕ ಆದರ್ಶವನ್ನು ಉಳಿಸಿಕೊಳ್ಳಲಾರ. ಅವನು ಕೆಲವೊಮ್ಮೆ ಸ್ವಲ್ಪಮಟ್ಟಿಗಾದರೂ ಅನೈತಿಕವಾಗಿ ವರ್ತಿಸಬಹುದು. ಇದರಿಂದ ಸದ್ಯದ ಪರಿಸ್ಥಿತಿಯಲ್ಲಿ ಸಮಾಜಕ್ಕೆ ಏನೂ ಹಾನಿ ಆಗದೆ ಇರಬಹುದು, ಮತ್ತು ವ್ಯಕ್ತಿಗೂ ತೊಂದರೆಯಾಗದಿರಬಹುದು. ಅಲ್ಪ ಸ್ವಲ್ಪ ಅನೈತಿಕತೆಯಿಂದ ಸಮಾಜಕ್ಕೂ ಏನೂ ಹಾನಿಯಾಗುವುದಿಲ್ಲ. ಆದರೆ ಇದು ಇಲ್ಲಿಗೇ ನಿಲ್ಲುವುದಿಲ್ಲ. ಕ್ರಮೇಣ ಅನೈತಿಕತೆ ವೃದ್ಧಿಯಾಗುತ್ತ ಹೋಗುತ್ತದೆ. ಅನಂತರ ವ್ಯಕ್ತಿ ಮತ್ತು ಸಮಾಜ ಎರಡೂ ಇದರ ದುಷ್ಪರಿಣಾಮಕ್ಕೆ ಒಳಗಾಗಬೇಕಾಗುತ್ತದೆ. ಆದ್ದರಿಂದ ಕೇವಲ ಸಾಮಾಜಿಕ ಆವಶ್ಯಕತೆಯೇ ನೈತಿಕತೆಯ ಸುಭದ್ರ ತಳಹದಿ ಆಗಲಾರದು.

**ಪ್ರಯೋಜನ ದೃಷ್ಟಿ**

ಇನ್ನೊಂದು ಪ್ರಯೋಜನ ದೃಷ್ಟಿ (Utilitarianism). ಇದರ ಪ್ರಕಾರ ನಾವು ಮಾಡುವ ಯಾವುದೇ ಕಾರ್ಯವಾಗಲಿ ಅದು ಹೆಚ್ಚು ಜನರಿಗೆ ಹೆಚ್ಚು ಸುಖವನ್ನು ನೀಡುವಂತಿರಬೇಕು. ನೈತಿಕ ಜೀವನದಲ್ಲಿ ಸಾಕಷ್ಟು ಕಷ್ಟನಷ್ಟಗಳಿದ್ದರೂ ಅದರಿಂದ ಹೆಚ್ಚು ಜನರಿಗೆ ಹೆಚ್ಚು ಹಿತವುಂಟಾಗುವುದರಿಂದ ನೈತಿಕ ಜೀವನವನ್ನೇ ಅನುಸರಿಸಬೇಕು. ಇಲ್ಲಿ ಸುಖವೆನ್ನುವುದು ಸಾಪೇಕ್ಷಿಕ ಸ್ಥಿತಿ. ಎಲ್ಲರ ಸುಖವೂ ಒಂದೇ ಆಗಿರುವುದಿಲ್ಲ—ಒಬ್ಬೊಬ್ಬರ ಸುಖದ ಕಲ್ಪನೆ ಒಂದೊಂದು ಬಗೆಯಾಗಿರುತ್ತದೆ. ಮತ್ತೆ ಬಹುಜನರ ಸುಖಕ್ಕೋಸ್ಕರ ಅಲ್ಪಸಂಖ್ಯಾತರ ಸುಖವನ್ನು ಕಡೆಗಣಿಸುವಂತಿಲ್ಲ. ಅಷ್ಟೇ ಅಲ್ಲದೆ, ಬಹುಜನರ ಸುಖಕ್ಕೋಸ್ಕರ ಕೆಟ್ಟಕಾರ್ಯವೂ ಧಾರ್ಮಿಕವಾಗುವ ಸಂಭವವಿದೆ. ಶ್ರೀಮಂತರನ್ನು ಕೊಳ್ಳೆ ಹೊಡೆದು ಬಡವರಿಗೆ ಸಹಾಯ ಮಾಡುವ ರಾಬಿನ್‌ಹುಡ್ ವಿಧಾನಕ್ಕೂ ಇಲ್ಲಿ ಆಸ್ಪದವಿರುತ್ತದೆ. ಪ್ರಯೋಜನ ದೃಷ್ಟಿಯನ್ನು ಸಾಮಾನ್ಯ ಸನ್ನಿವೇಶಗಳಲ್ಲಿ ಅನುಸರಿಸಬಹುದೇ ಹೊರತು ಅದನ್ನೇ ಒಂದು ನೈತಿಕ ತಳಹದಿಯನ್ನಾಗಿ ಮಾಡಲಾಗುವುದಿಲ್ಲ.

ಸ್ವಾಮಿ ವಿವೇಕಾನಂದರು ಪ್ರಯೋಜನದೃಷ್ಟಿಯ ಸಂಬಂಧವಾಗಿ ಈ ರೀತಿ ಹೇಳುತ್ತಾರೆ : "ಪ್ರಯೋಜನದೃಷ್ಟಿಯು ಮಾನವರ ನೈತಿಕ ಸಂಬಂಧವನ್ನು ವಿವರಿಸಲಾರದು. ಮೊದಲನೆಯದಾಗಿ ಪ್ರಯೋಜನದೃಷ್ಟಿಯಿಂದ ನಮಗೆ ಯಾವ ನೀತಿ ನಿಯಮವೂ ದೊರಕುವುದಿಲ್ಲ. ಅಲೌಕಿಕದ ಅಪ್ಪಣೆ ಇಲ್ಲದೆ, ಅಥವಾ ನಾನು ಹೇಳಲಿಚ್ಛಿಸುವಂತೆ ಪ್ರಜ್ಞಾತೀತದ ಅನುಭವವಿಲ್ಲದೆ ನೀತಿಗೆ ನೆಲೆ ಇಲ್ಲ. ಅನಂತತೆಗಾಗಿ ಹೋರಾಟವಿಲ್ಲದೆ ಇದ್ದರೆ ಯಾವ ಆದರ್ಶವೂ ಇರಲಾರದು. ಮನುಷ್ಯರನ್ನು ಕೇವಲ ತಮ್ಮ ಸಮಾಜಕ್ಕೆ ಮಾತ್ರ ಬಂಧಿಸಲೆತ್ನಿಸುವ ಯಾವ ಸಿದ್ಧಾಂತವೂ ಮಾನವಕೋಟಿಯ ನೀತಿಯ ನಿಯಮಾವಳಿಗೆ ವಿವರಣೆಯನ್ನು ಕೊಡಲಾರದು. ಅತೀಂದ್ರಿಯ ವಸ್ತುವಿನ ಗ್ರಹಣ, ಅನಂತತೆಯೆಡೆಗೆ ನಿರಂತರ ಹೋರಾಟ, ಇವುಗಳ ಅನುಷ್ಠಾನ—ಇವು ಸಾಧ್ಯವಲ್ಲ, ನಿಷ್ಪ್ರಯೋಜಕ ಮತ್ತು ಇವುಗಳನ್ನು ತ್ಯಜಿಸಿ ಎನ್ನುವನು ಪ್ರಯೋಜನದೃಷ್ಟಿಯವನು. ಆದರೆ ತಕ್ಷಣವೇ ನೀತಿಯನ್ನು ಅನುಸರಿಸಿ ಸಮಾಜಕ್ಕೆ ಒಳ್ಳೆಯದನ್ನು ಮಾಡಿ ಎನ್ನುವನು. ನಾವೇಕೆ ಒಳ್ಳೆಯದನ್ನು ಮಾಡಬೇಕು? ಮತ್ತೊಬ್ಬರಿಗೆ ಒಳ್ಳೆಯದನ್ನು ಮಾಡುವುದು ಗೌಣ. ನಮಗೆ ಒಂದು ಆದರ್ಶವಿರಬೇಕು. ನೀತಿಯೇ ಗುರಿಯಲ್ಲ, ಅದು ಗುರಿಯೆಡೆಗೆ ಒಯ್ಯುವ ಒಂದು ದಾರಿ." (*ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೨, ಪು.೮*)

**ಸಾರ್ವತ್ರಿಕ ದೃಷ್ಟಿ**

ಈ ಪ್ರಯೋಜನ ದೃಷ್ಟಿಗೆ ವಿರುದ್ಧವಾಗಿ ಇಮ್ಯಾನುಯಲ್ ಕಾಂಟ್‌ನ ನೈತಿಕ ಸಿದ್ಧಾಂತವಿದೆ. ಇದರ ಪ್ರಕಾರ

> **ನನ್ನ ಆತ್ಮವೇ ನಾನು ಭಾವಿಸಬಲ್ಲ ಪರಮ ಆದರ್ಶ. ನನ್ನ ನೈಜ ಸ್ವಭಾವವನ್ನು ಅರಿಯುವುದೇ ನನ್ನ ಜೀವನದ ಏಕಮಾತ್ರ ಗುರಿ. —*ಸ್ವಾಮಿ ವಿವೇಕಾನಂದ.***

ನೈತಿಕತೆಯೆಂಬುದು ಅನಿವಾರ್ಯವಾಗಿ ಮಾಡಲೇಬೇಕಾದುದು **(Categorical Imperative)**. ನೈತಿಕ ಕ್ರಿಯೆಗಳನ್ನು ಕರ್ತವ್ಯದೃಷ್ಟಿಯಿಂದ ಮಾಡಬೇಕು, ಪ್ರಯೋಜನ ದೃಷ್ಟಿಯಿಂದಲ್ಲ. ಈ ಕರ್ತವ್ಯದೃಷ್ಟಿ ವ್ಯಕ್ತಿಯ ಸಾರ್ವತ್ರಿಕ ದೃಷ್ಟಿಯನ್ನು ಅವಲಂಬಿಸಿರುತ್ತದೆ. ಅಂದರೆ ಅವನ ಪ್ರಕಾರ ಸಾರ್ವತ್ರಿಕವಾಗಿ ಯಾವುದು ನಿಯಮವಾಗಬಲ್ಲದೊ ಆ ನಿಯಮಕ್ಕೆ ಅನುಗುಣವಾಗಿ ನಾವು ವರ್ತಿಸಬೇಕು. ಸತ್ಯ, ಅಹಿಂಸೆ ಮುಂತಾದ ಸನ್ನಡತೆಗಳು ಸಾರ್ವತ್ರಿಕವಾಗಿರಬಲ್ಲವು—ಅಂದರೆ ಇವು ಸರ್ವತ್ರವೂ ಸರ್ವಕಾಲದಲ್ಲಿಯೂ ಸರ್ವರಿಗೂ ಅನ್ವಯಿಸುವಂಥವುಗಳು. ಅಸತ್ಯ, ಹಿಂಸೆ, ಮೋಸ, ಕಳ್ಳತನ—ಮುಂತಾದ ದುರ್ಗುಣಗಳು ಸಾರ್ವತ್ರಿಕವಾಗಲಾರವು. ಸುಳ್ಳುಹೇಳುವವನು, ಮೋಸಮಾಡುವವನು, ಕದಿಯುವವನು ಎಲ್ಲರೂ ಹಾಗೇ ಮಾಡಬೇಕೆಂದು ಬಯಸುವುದಿಲ್ಲ. ಅವನಿಗೂ ಗೊತ್ತು ಎಲ್ಲರೂ ಹಾಗೆ ಮಾಡಿದರೆ ಸಮಾಜ ಉಳಿಯುವುದಿಲ್ಲವೆಂದು. ಆದರೆ ಒಬ್ಬ ನೈತಿಕ ವ್ಯಕ್ತಿ ಎಲ್ಲರೂ ನೀತಿವಂತರಾಗಿರಬೇಕೆಂದು ಬಯಸುತ್ತಾನೆ—ಎಲ್ಲರೂ ನೀತಿವಂತರಾಗಿರಲು ಸಾಧ್ಯ, ಅನೀತಿವಂತರಾಗಿರಲು ಸಾಧ್ಯವಿಲ್ಲ—ಎಂಬುದು ಅವನಿಗೆ ಗೊತ್ತು.

### ನೀತಿ ಮತ್ತು ಜ್ಞಾನ

ಈ ರೀತಿ ಸಾರ್ವತ್ರಿಕ ದೃಷ್ಟಿಯಿಂದ ಉದ್ಭವಿಸಿದ ಕರ್ತವ್ಯಪ್ರಜ್ಞೆಯೇ ನೈತಿಕತೆಯ ಮೂಲಸೆಲೆ. ಪ್ರಾಭಾಕರ ಮೀಮಾಂಸಕರ ಧಾರ್ಮಿಕ ಚಿಂತನೆಯ ಮೂಲಸೂತ್ರವಾದ, **ಕಾರ್ಯತಾಜ್ಞಾನಂ ಪ್ರವರ್ತಕಂ**—"ಇದನ್ನು ಮಾಡಲೇಬೇಕು ಎಂಬ ಜ್ಞಾನವೇ ಧರ್ಮದಲ್ಲಿ ಒಬ್ಬನನ್ನು ತೊಡಗಿಸಬೇಕು"—ಎಂಬ ತತ್ತ್ವ ಕಾಂಟನ ಅಭಿಪ್ರಾಯಕ್ಕೆ ಹೊಂದಿಕೊಳ್ಳುತ್ತದೆ. ಬಹುಶಃ ಸಾಕ್ರಟೀಸನು ಈ ದೃಷ್ಟಿಯಿಂದಲೇ "ಧರ್ಮವೇ ಜ್ಞಾನ" **(Virtue is Knowledge)** ಎಂದು ಹೇಳಿರಬಹುದು. ಅವನ ದೃಷ್ಟಿಯಲ್ಲಿ ಧರ್ಮದ ಅರ್ಥವನ್ನು ಯಾರು ನಿಜವಾಗಿಯೂ ತಿಳಿದುಕೊಂಡಿರುವನೊ ಅವನು ಅದನ್ನು ಅನುಸರಿಸದೆ ಇರಲಾರನು. ಆದರೆ ಇಲ್ಲಿ ದುರ್ಯೋಧನನ ಈ ಕೆಳಗಿನ ಮಾತು ಸಾಕ್ರಟೀಸನ ಅಭಿಪ್ರಾಯದಲ್ಲಿ ಸಂದೇಹವನ್ನು ಹುಟ್ಟಿಸುತ್ತದೆ: *ಜಾನಾಮಿ ಧರ್ಮಂ ನ ಚ ಮೇ ಪ್ರವೃತ್ತಿಃ, ಜಾನಾಮ್ಯಧರ್ಮಂ ನ ಚ ಮೇ ನಿವೃತ್ತಿಃ*—"ನನಗೆ ಧರ್ಮವೆಂದರೇನೆಂಬುದು ಗೊತ್ತು, ಆದರೆ ಅದನ್ನು ಅನುಸರಿಸಲಾರೆ ಹಾಗೂ ಅಧರ್ಮವೆಂದರೆ ಏನೆಂಬುದು ಗೊತ್ತು, ಆದರೆ ಅದನ್ನು ಬಿಡಲಾರೆ."

ಸಾಕ್ರಟೀಸನ ದೃಷ್ಟಿಯಲ್ಲಿ ಜ್ಞಾನವೆಂದರೆ ಧರ್ಮದ ಬಗ್ಗೆ ಕೇವಲ ಸೈದ್ಧಾಂತಿಕ ಜ್ಞಾನವಲ್ಲ, ಆದರೆ ಆಳ ಕ್ರಿಯಾಶೀಲ ವಿಶ್ವಾಸ, ಅದು ಬೌದ್ಧಿಕ ತಿಳಿವಳಿಕೆಯಲ್ಲ, ಆದರೆ ಇಚ್ಛಾಪೂರ್ವಕ ಅರಿವು. ಅವನು ಹೇಳುತ್ತಾನೆ, "ಯಾವಾತನೂ ಕೆಟ್ಟದ್ದನ್ನು ಅಥವಾ ತಾನು ಕೆಟ್ಟದ್ದು ಎಂದು ತಿಳಿದುದನ್ನು ಇಚ್ಛಾಪೂರ್ವಕವಾಗಿ ಅನುಸರಿಸುವುದಿಲ್ಲ. ಒಳ್ಳೆಯದರ ಬದಲು ಕೆಟ್ಟದ್ದನ್ನು ಆರಿಸಿಕೊಳ್ಳುವುದು ಮನುಷ್ಯನ ಸ್ವಭಾವದಲ್ಲಿಲ್ಲ."(*A History of Philosophy*, Frank Thilly, p.56). ಅಂದರೆ ಒಳ್ಳೆಯತನ ಮನುಷ್ಯನ ಆಂತರಿಕ ಸ್ವಭಾವದಲ್ಲಿದೆ.

### ನೀತಿ ಆಂತರಿಕ ಒಳ್ಳೆಯತನವನ್ನು ಆಧರಿಸಿದೆ

ನಿಜವಾದ ನೈತಿಕತೆ ವ್ಯಕ್ತಿಯಲ್ಲಿರುವ ಆಂತರಿಕ ಒಳ್ಳೆಯತನವನ್ನು ಆಧರಿಸಿದೆ. ವ್ಯಕ್ತಿ ನೈತಿಕತೆಯನ್ನು ಅನುಸರಿಸಬೇಕಾದುದು ಹೊರಗಿನ ಆವಶ್ಯಕತೆಯಿಂದಲ್ಲ, ಹೊರಗಿನ ಒತ್ತಾಯದಿಂದಲ್ಲ, ಅಥವಾ ಶಿಕ್ಷೆಯ ಭಯದಿಂದಲೂ ಅಲ್ಲ, ಅವನ ಸ್ವಭಾವವೇ ಒಳ್ಳೆಯದಾಗಿರುವುದರಿಂದ. ಆರೋಗ್ಯವಂತವಾಗಿರುವುದು ದೇಹದ ಸ್ವಭಾವ, ಕಾಯಿಲೆ ಬರುವುದು ಕೆಲವು ದೋಷಗಳಿಂದ. ಹಾಗೆಯೆ ನೈತಿಕವಾಗಿ ಜೀವಿಸುವುದು ಮಾನವನ ಸ್ವಭಾವ. ಅನೈತಿಕತೆ ಅವನಿಗೆ ಅಸ್ವಾಭಾವಿಕ, ಕೆಲವು ವೈಯಕ್ತಿಕ ಮತ್ತು ಸಾಮಾಜಿಕ ದೋಷಗಳಿಂದ ಉಂಟಾಗುತ್ತದೆ. ವ್ಯಕ್ತಿಯಲ್ಲಿ ತನ್ನ ಆಂತರಿಕ ಒಳ್ಳೆಯತನದ ಅರಿವು ಮೂಡಬೇಕು, ತನ್ನ ಬಗ್ಗೆ ಉದಾತ್ತ ಭಾವನೆಯೂ ಗೌರವವೂ ಉಂಟಾಗಬೇಕು. ಆಗ ವ್ಯಕ್ತಿ ಸ್ವಾಭಾವಿಕವಾಗಿಯೇ ನೈತಿಕ ಮಾರ್ಗವನ್ನು ಅನುಸರಿಸುತ್ತಾನೆ, ಹೊರಗಿನ ಒತ್ತಡ ಬೇಕಾಗುವುದಿಲ್ಲ. ಹೊರಗಿನ ಭಯ ಮತ್ತು ಒತ್ತಡ ಪ್ರಾರಂಭದಲ್ಲಿ ಆವಶ್ಯಕವಾದರೂ ವ್ಯಕ್ತಿ ಸ್ವಾಭಾವಿಕವಾಗಿಯೇ ನೈತಿಕತೆಯನ್ನು ಅನುಸರಿಸುವಂತಾಗಲು ಅವನ ನೈತಿಕ ಪ್ರಜ್ಞೆಯನ್ನು ನಾವು ಬಲಪಡಿಸಬೇಕು. ಪ್ರಾರಂಭದಿಂದಲೇ ಮಕ್ಕಳಿಗೆ, ಹಣಸಂಪಾದನೆಗೆ ಪ್ರೇರಣೆ ನೀಡುವ ಬದಲು, ಆತ್ಮಶ್ರದ್ಧೆಯ ಭಾವನೆಗಳನ್ನು ನೀಡಿದರೆ, ಅವರಲ್ಲಿ ಆತ್ಮಗೌರವವನ್ನು ಕೆರಳಿಸಿದರೆ ಮತ್ತು ನೈತಿಕತೆಯ ಆವಶ್ಯಕತೆಯನ್ನು ಅವರು ಮನಗಾಣುವಂತೆ ಮಾಡಿದರೆ ಆಗ ಅವರು ಸ್ವಾಭಾವಿಕವಾಗಿಯೇ ನೈತಿಕ ಮಾರ್ಗವನ್ನು ಅನುಸರಿಸುತ್ತಾರೆ.

ತಂದೆತಾಯಿಗಳು ಮತ್ತು ಹಿರಿಯರು ಮಕ್ಕಳಿಗೆ ಸುಳ್ಳು

> ಆತ್ಮಶ್ರದ್ಧೆಯ ಆದರ್ಶ ನಮಗೆ ಬಹಳ ಸಹಕಾರಿ. ನಮ್ಮಲ್ಲಿ ನಮಗೆ ನಂಬಿಕೆಯನ್ನು ಹೆಚ್ಚು ಬೋಧಿಸಿದ್ದರೆ ಅದನ್ನು ಅನುಷ್ಠಾನಕ್ಕೆ ತಂದಿದ್ದರೆ ನಮ್ಮಲ್ಲಿರುವ ಅನೇಕ ದೋಷಗಳು ಮತ್ತು ದುಃಖದ ಬಹುಭಾಗ ಮಾಯವಾಗುತ್ತಿದ್ದವು. —*ಸ್ವಾಮಿ ವಿವೇಕಾನಂದ*

ಹೇಳಬೇಡ. ಕದಿಯಬೇಡ ಮುಂತಾದ ನೈತಿಕ ಬೋಧನೆಯನ್ನು ಮಾಡುತ್ತಾರೆ ಮತ್ತು ಅವರು ಅನೈತಿಕವಾಗಿ ವರ್ತಿಸಿದರೆ ಬೈಯುತ್ತಾರೆ ಅಥವಾ ಹೊಡೆಯುತ್ತಾರೆ. ಆದರೆ ಏಕೆ ಹಾಗೆ ಮಾಡಬಾರದು ಎಂಬುದನ್ನು ಅವರು ತಿಳಿಸಿಕೊಡುವುದಿಲ್ಲ. ಇದರಿಂದಾಗಿ ನೈತಿಕತೆಯ ಆವಶ್ಯಕತೆಯ ಅರಿವು ಅವರಿಗೆ ಉಂಟಾಗುವುದೇ ಇಲ್ಲ. ಇನ್ನೊಂದು ವಿಷಯವೇನೆಂದರೆ ಮಕ್ಕಳು ನಮ್ಮ ನುಡಿಗಿಂತ ನಮ್ಮ ನಡೆಯನ್ನು ಅನುಸರಿಸುವುದೇ ಅಧಿಕ. ಆದ್ದರಿಂದ ಅವರಲ್ಲಿ ನೈತಿಕ ಪ್ರಜ್ಞೆ ಮೂಡುವಂತಾಗಲು ಮನೆಯಲ್ಲಿ ನೈತಿಕ ವಾತಾವರಣ ಸೃಷ್ಟಿಯಾಗಬೇಕು.

### ಸ್ವಕೇಂದ್ರಿತ ಮತ್ತು ಪರಕೇಂದ್ರಿತ ನೈತಿಕತೆ

ಕೆಲವರು ಸಾಂಪ್ರದಾಯಿಕ ನೀತಿಸಂಹಿತೆಗಳಿಗೆ ಬದ್ಧರಾಗಿ ನೈತಿಕ ಗುಣಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿರುತ್ತಾರೆ. ಅವರಿಗೆ ತಾವು ನೀತಿವಂತರಾಗಿರುವುದೇ ಅತ್ಯಂತ ಮುಖ್ಯ. ಇತರರ ಬಗ್ಗೆ ಕಳಕಳಿ ಇರುವುದಿಲ್ಲ. ಅವರು ಯಾವಾಗಲೂ ಸತ್ಯವನ್ನೇ ಹೇಳುತ್ತಾರೆ. ಇತರರಿಗೆ ಅದರಿಂದ ಹಾನಿಯಾಗುವಂತಿದ್ದರೂ ಅದನ್ನು ಅವರು ಲೆಕ್ಕಿಸುವುದಿಲ್ಲ. ಅವರ ಪ್ರಾಮಾಣಿಕತೆ ಇತರರಿಗಾಗಿ ಅಲ್ಲ—ತಾನು ಪ್ರಾಮಾಣಿಕನಾಗಿರಬೇಕೆಂದು ಮಾತ್ರ. ಇಂತಹ ವ್ಯಕ್ತಿಗಳು ನಿಃಸ್ವಾರ್ಥಿಗಳಾಗಿರುವುದೂ ತಾವು ನಿಃಸ್ವಾರ್ಥಿಗಳಾಗಿರಬೇಕೆಂಬ ಹುಂಬತನದಿಂದ. ಅವರು ಇತರರಿಗೆ ದಾನ ಮಾಡುವುದೂ ತಾವು ದಾನಿಗಳು ಎಂಬ ಮನಃಸಮಾಧಾನಕ್ಕೋಸ್ಕರ—ಇತರರ ಮೇಲಿನ ಕಳಕಳಿ ಅಲ್ಲಿ ಗೌಣವಾಗಿರುತ್ತದೆ. ಈ ಬಗೆಯ ನೈತಿಕತೆಯನ್ನು ಸ್ವಕೇಂದ್ರಿತ ನೈತಿಕತೆ ಎಂದು ಕರೆಯಬಹುದು. ಇದು ಅನೈತಿಕ ಜೀವನಕ್ಕಿಂತ ಎಷ್ಟೋ ಉತ್ತಮವಾದರೂ ಉನ್ನತ ನೈತಿಕ ಆದರ್ಶವಾಗಲಾರದು.

ಇದಕ್ಕಿಂತಲೂ ಉನ್ನತವಾದುದು ಪರಕೇಂದ್ರಿತ ನೈತಿಕತೆ. ಇಲ್ಲಿ ಇತರರ ಮೇಲಿನ ಪ್ರೀತಿ, ಸಹಾನುಭೂತಿ, ಸಾಮಾಜಿಕ ಕಳಕಳಿ ಇತ್ಯಾದಿಗಳು ಪ್ರಧಾನವಾಗಿರುತ್ತವೆ. ಇತರರ ಒಳಿತಿಗಾಗಿ ಇಂತಹ ಮನೋಭಾವದವರು ಸುಳ್ಳುಹೇಳಬೇಕಾಗಿ ಬಂದರೂ ಹಿಂಜರಿಯುವುದಿಲ್ಲ. ಇಲ್ಲಿ ಶ್ರೀಕೃಷ್ಣನು ಮಹಾಭಾರತದಲ್ಲಿ ಹೇಳಿದ ಮಾತನ್ನು ನೆನೆಸಿಕೊಳ್ಳಬಹುದು :

**ನ ತತ್ತ್ವವಚನಂ ಸತ್ಯಂ ನಾತತ್ತ್ವವಚನಂ ಮೃಷಾ ।**
**ಯದ್ಭೂತಹಿತಮತ್ಯಂತಂ ತದ್ಧಿ ಸತ್ಯಂ ಪ್ರಕೀರ್ತಿತಮ್ ॥**

*"ಇದ್ದದ್ದನ್ನು ಇದ್ದಂತೆ ಹೇಳುವುದೇ ಸತ್ಯವಲ್ಲ, ಅಥವಾ ಇದ್ದದ್ದನ್ನು ಇದ್ದಂತೆ ಹೇಳದಿರುವುದೇ ಸುಳ್ಳಲ್ಲ. ಯಾವುದು ಇತರರ ಹಿತಕ್ಕಾಗಿ ಇದೆಯೋ ಅದೇ ಸತ್ಯ."*

'ಮಹಾಭಾರತ'ದ ದುರಂತಕ್ಕೆಲ್ಲ ಮುಖ್ಯ ಕಾರಣವೇ ಸ್ವಕೇಂದ್ರಿತ ಧರ್ಮನಿಷ್ಠೆ. ಧರ್ಮರಾಯ, ಭೀಷ್ಮ, ದ್ರೋಣಾದಿಗಳೆಲ್ಲ ತಮ್ಮ ಕಣ್ಮುಂದೆಯೆ ದ್ರೌಪದಿಗೆ ಅವಮಾನವಾಗುತ್ತಿದ್ದರೂ ಧರ್ಮಕ್ಕೆ ಬದ್ಧರಾಗಿ ಎಲ್ಲರೂ ಮೂಕಸಾಕ್ಷಿಗಳಾಗಿದ್ದರು. ತಮ್ಮ 'ಧರ್ಮಸಂಕಟ'ದಲ್ಲಿ ದ್ರೌಪದಿಯ ಸಂಕಟವನ್ನೇ ಮರೆತುಬಿಟ್ಟರು. ಧರ್ಮ ಇರುವುದು ವ್ಯಕ್ತಿಗಾಗಿ, ವ್ಯಕ್ತಿ ಧರ್ಮಕ್ಕಾಗಿ ಅಲ್ಲ ಎಂಬುದನ್ನು ಅರಿಯಲಾರದೆ ಹೋದರು. ಬೈಬಲಿನಲ್ಲಿ ಬರುವ ಒಂದು ಘಟನೆಯನ್ನಿಲ್ಲಿ ನಾವು ಸ್ಮರಿಸಿಕೊಳ್ಳಬಹುದು. ಸಬ್ಬತ್ ದಿನದಲ್ಲಿ ಯೇಸುವಿನ ಶಿಷ್ಯರು ಉಪವಾಸ ವ್ರತವನ್ನು ಮಾಡದೆ ಆಹಾರವನ್ನು ಸೇವಿಸುತ್ತಿದ್ದುದನ್ನು ಕಂಡು ಸಾಂಪ್ರದಾಯಿಕ ಯಹೂದಿಗಳು ಆಕ್ಷೇಪಣೆ ಎತ್ತಿದಾಗ ಯೇಸುಕ್ರಿಸ್ತನು ಹೇಳುತ್ತಾನೆ: "ಸಬ್ಬತ್ ಮಾನವನಿಗಾಗಿ ಇರುವುದೇ ಹೊರತು ಮಾನವ ಸಬ್ಬತ್ತಿಗಾಗಿ ಅಲ್ಲ."

### ಆಂತರಿಕ ಪರಿವರ್ತನೆ

ಈ ಕಾರಣಕ್ಕಾಗಿಯೇ ಸ್ವಾಮಿ ವಿವೇಕಾನಂದರು, ಸ್ವಾರ್ಥತ್ಯಾಗವೇ ನೀತಿಯ ತಳಹದಿ ಎಂದರು. ತ್ಯಾಗವು ಆಧಾರವಾಗಿರದ ನೀತಿಸಂಹಿತೆ ಎಂಬುದಿಲ್ಲವೇ ಇಲ್ಲ ಎಂದರು. 'ನಾನು' ಎಂಬುದನ್ನು ಹಿಂದೆ ಮಾಡಿ 'ನೀನು' ಎಂಬುದನ್ನು ಮುಂದೆ ಮಾಡುವುದೇ ನೀತಿ, ಎಂಬುದು ಅವರ ಸಿದ್ಧಾಂತ. ಆದ್ದರಿಂದ ನೈತಿಕತೆ ಕೇವಲ ಬಾಹ್ಯ ಆಚರಣೆಯಾದರೆ ಪ್ರಯೋಜನವಿಲ್ಲ, ಅದು ಆಂತರಿಕ ಭಾವವಾಗಬೇಕು. ನಾವು ನೈತಿಕವಾಗಿ ನಡೆಯುವುದು ಮಾತ್ರವಲ್ಲ ನೈತಿಕವಾಗಿ ಇರಬೇಕು. ಇತರರನ್ನು ಹಿಂಸಿಸದಿರುವುದಕ್ಕಿಂತ ಇತರರನ್ನು ದ್ವೇಷಿಸದಿರುವುದು ಮುಖ್ಯ; ಸುಳ್ಳುಹೇಳದೇ ಇರುವುದಕ್ಕಿಂತ ಆಂತರಿಕ ಸತ್ಯನಿಷ್ಠೆ ಮುಖ್ಯ; ಇನ್ನೊಬ್ಬರ ವಸ್ತುವನ್ನು ಕದಿಯದಿರುವುದಕ್ಕಿಂತ ಆ ವಸ್ತುವಿಗಾಗಿ ಆಸೆ ಪಡದಿರುವುದು ಮುಖ್ಯ; ಮೋಸ, ವಂಚನೆ ಇತ್ಯಾದಿಗಳಲ್ಲಿ ತೊಡಗದೇ ಇರುವುದಕ್ಕಿಂತ ಇತರರನ್ನು ಪ್ರೀತಿಸುವುದು, ಅವರಿಗೆ ಸಹಾನುಭೂತಿ ತೋರಿಸುವುದು ಅತ್ಯಂತ ಮುಖ್ಯ.

ಅನೇಕರು ಇತರರಿಗೆ ಸಹಾಯ ಮಾಡುತ್ತಾರೆ, ಕಳಕಳಿ ತೋರಿಸುತ್ತಾರೆ, ಸಮಾಜಸೇವೆ ಮಾಡುತ್ತಾರೆ. ಆದರೆ ವೈಯಕ್ತಿಕವಾಗಿ ಅನೈತಿಕ ಜೀವನ ನಡೆಸುತ್ತಾರೆ. ಎಷ್ಟೋ ಅನೈತಿಕ ವ್ಯವಹಾರಗಳ ಮೂಲಕ ಬೃಹತ್ಪ್ರಮಾಣದಲ್ಲಿ ಸಮಾಜಸೇವೆ ಮಾಡಲು ಉದ್ಯುಕ್ತರಾಗುತ್ತಾರೆ. ಇದರಿಂದ ಸಮಾಜದಲ್ಲಿ

ಕ್ರಮೇಣ ನೈತಿಕ ಅಧಃಪತನವುಂಟಾಗುತ್ತದೆ. ಜನರಲ್ಲಿ ನೈತಿಕ ನಿಷ್ಠೆ ಕಡಮೆಯಾಗಿ ಸಮಾಜ ದುರ್ಬಲವಾಗುತ್ತದೆ. ಆದ್ದರಿಂದ ನೈತಿಕನಿಷ್ಠೆಯೂ ಬೇಕು ಹಾಗೂ ಸಾಮಾಜಿಕ ಕಳಕಳಿಯೂ ಇರಬೇಕು. ನೈತಿಕತೆಯು ಕೇವಲ ಸ್ವಕೇಂದ್ರಿತವಾಗಿರದೆ ಪರಕೇಂದ್ರಿತವಾಗಿರಬೇಕಾದರೆ ಸಾಮಾಜಿಕ ಹಿತಾಸಕ್ತಿ ಅತ್ಯಂತ ಮುಖ್ಯ.

ಈ ನೈತಿಕತೆಯ ವೈಶಾಲ್ಯತೆಯು ಆಂತರಿಕ ಪರಿವರ್ತನೆಯನ್ನು ಅವಲಂಬಿಸಿರುತ್ತದೆ, ಅಂದರೆ ಆಧ್ಯಾತ್ಮಿಕ ಬೆಳವಣಿಗೆಯನ್ನು ಅವಲಂಬಿಸಿರುತ್ತದೆ. ವೇದಾಂತದ ಮತ್ತು ಸ್ವಾಮಿ ವಿವೇಕಾನಂದರ ಪ್ರಕಾರ ಮಾನವನು ಸ್ವಾಭಾವಿಕವಾಗಿಯೇ ದಿವ್ಯನು, ಪರಿಪೂರ್ಣನು. ದಿವ್ಯತೆಯ ಅಭಿವ್ಯಕ್ತಿಯ ಮೂಲಕ ಸ್ವಾಭಾವಿಕ ಒಳ್ಳೆಯತನವನ್ನು ಪಡೆಯುವುದೇ ಧರ್ಮ. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ಸುಪ್ತಾತ್ಮವು ಪ್ರಜ್ಞಾಪೂರ್ಣವಾಗಿ ಕ್ರಿಯಾಶೀಲವಾದಾಗ ಶಕ್ತಿ ಬರುತ್ತದೆ, ವೈಭವ ಬರುತ್ತದೆ, ಒಳ್ಳೆಯತನ ಬರುತ್ತದೆ, ಪಾವಿತ್ರ್ಯ ಬರುತ್ತದೆ ಮತ್ತು ಮಹೋನ್ನತವಾದುದೆಲ್ಲವೂ ಬರುತ್ತದೆ." (**ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೨, ಪು.೨೨**) ಅಮೆರಿಕದ ತತ್ತ್ವಜ್ಞಾನಿ ಎಮರ್ಸನ್ ಇದೇ ಅರ್ಥ ಬರುವಂತಹ ಹೇಳಿಕೆಯನ್ನಿತ್ತಿರುವನು: "ಮಾನವನ ಆತ್ಮವು ಬುದ್ಧಿಯ ಮೂಲಕ ಹೊರಹೊಮ್ಮಿದಾಗ ಅದು ಪ್ರತಿಭೆ, ಅದು ಇಚ್ಛೆಯ ಮೂಲಕ ಹೊರಹೊಮ್ಮಿದಾಗ ನೈತಿಕ ಪರಿಪೂರ್ಣತೆ ಉಂಟಾಗುತ್ತದೆ ಮತ್ತು ಭಾವದ ಮೂಲಕ ವ್ಯಕ್ತವಾದಾಗ ಅದೇ ಪ್ರೀತಿಯಾಗುತ್ತದೆ."

**ವೈಯಕ್ತಿಕ ಮತ್ತು ಸಾಮಾಜಿಕ ನೀತಿ**

ಇದಕ್ಕೆ ಸಂಬಂಧಿಸಿದಂತೆ ವೈಯಕ್ತಿಕ ನೀತಿ ಮತ್ತು ಸಾಮಾಜಿಕ ನೀತಿ—ಈ ವಿಷಯವನ್ನು ಕುರಿತಾಗಿಯೂ ನಾವು ಸ್ವಲ್ಪ ಚರ್ಚಿಸಬಹುದು. ವೈಯಕ್ತಿಕ ನೀತಿಯೆಂದರೆ ಸತ್ಯ, ಅಹಿಂಸೆ ಮುಂತಾದ ನೈತಿಕ ಗುಣಗಳು; ತಂದೆತಾಯಿಗಳನ್ನು ಆದರಿಸುವುದು, ಪತಿ-ಪತ್ನಿಯರ ಮತ್ತು ಸಹೋದರರ ನಡುವಿನ ಪ್ರೀತಿಯುತ ಸಹಬಾಳ್ವೆ ಮುಂತಾದ ಕೌಟುಂಬಿಕ ಗುಣಗಳು. ಭಾರತವು ಈ ಗುಣಗಳಿಗೆ ಹೆಚ್ಚು ಒತ್ತನ್ನು ನೀಡುತ್ತದೆ. ಸಮಾಜದಲ್ಲಿ ಇತರರೊಡನೆ ವ್ಯವಹರಿಸುವ ರೀತಿ, ಸಂಘಬದ್ಧರಾಗಿ ಕೆಲಸ ಮಾಡುವ ವಿಧಾನ, ಪೌರನೀತಿ, ಮುಂತಾದುವು ಸಾಮಾಜಿಕ ನೀತಿ. ಪಶ್ಚಿಮದೇಶಗಳು ಇವಕ್ಕೆ ಒತ್ತನ್ನು ನೀಡಿದವು. ಆದ್ದರಿಂದ ಅಲ್ಲಿ ಸಮಾಜ ಹೆಚ್ಚು ಮುಂದುವರಿಯಲು ಸಾಧ್ಯವಾಯಿತು. ಆದರೆ ಅವರು ವೈಯಕ್ತಿಕ ನೀತಿಯಲ್ಲಿ ಹಿಂದೆ. ಅಲ್ಲಿಯ ಕುಟುಂಬ ವ್ಯವಸ್ಥೆ ಸುಭದ್ರವಾಗಿಲ್ಲ. ಅದು ಈಗ ಕುಸಿಯುತ್ತಿದೆ. ಅದು ಸಮಾಜದ ಮೇಲೆ ದುಷ್ಪರಿಣಾಮವನ್ನು ಉಂಟುಮಾಡುವುದು ಅನಿವಾರ್ಯ.

ಭಾರತದಲ್ಲಿ ಕುಟುಂಬ ವ್ಯವಸ್ಥೆ ಇನ್ನೂ ಸಾಕಷ್ಟು ಭದ್ರವಾಗಿದೆ. ಆದರೆ ಒಟ್ಟು ಸಮಾಜ ಅಸ್ತವ್ಯಸ್ತವಾಗಿದೆ. ಇದು ಕ್ರಮೇಣ ಕುಟುಂಬ ವ್ಯವಸ್ಥೆಯನ್ನೂ ಕೆಡಿಸದೆ ಇರಲಾರದು. ಸಾಮಾಜಿಕ ನೀತಿಯನ್ನು ನಾವು ಪಶ್ಚಿಮದಿಂದ ಕಲಿಯಬೇಕಾಗಿದೆ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು. ಪಶ್ಚಿಮದ ಸಾಮಾಜಿಕ ನೀತಿಯೊಂದಿಗೆ ಭಾರತೀಯ ವೈಯಕ್ತಿಕ ನೀತಿಯು ಸಮನ್ವಯಗೊಂಡಾಗ ಸುಭದ್ರ ಸಮಾಜವು ತಲೆಯೆತ್ತುತ್ತದೆ. ಹಿಂದೆ ಜಾತೀಯವಾಗಿ ಹಾಗೂ ಮತೀಯವಾಗಿ ಅನೇಕ ನೀತಿ ನಿಬಂಧನೆಗಳಿಂದ ಕಟ್ಟಲ್ಪಟ್ಟ ಭಾರತೀಯ ಸಮಾಜವು ಒಂದು ರೀತಿಯಲ್ಲಿ ಸುಭದ್ರವಾಗಿತ್ತು. ಆದರೆ ವ್ಯಕ್ತಿಸ್ವಾತಂತ್ರ್ಯವಿರಲಿಲ್ಲ. ಇದರಿಂದಾಗಿ ಭಾರತವು ವಿಜ್ಞಾನವೇ ಮುಂತಾದ ಅನೇಕ ಕ್ಷೇತ್ರಗಳಲ್ಲಿ ಅತ್ಯಂತ ಹಿಂದುಳಿಯಬೇಕಾಯಿತು. ಬಹಳ ಹಿಂದೆಯೇ ಈ ಭದ್ರ ಕೋಟೆಯನ್ನು ಒಡೆದು ಹೊರಬಂದ ಪಶ್ಚಿಮದೇಶಗಳು ಈ ಕ್ಷೇತ್ರಗಳಲ್ಲಿ ಬಹಳಷ್ಟು ಮುಂದುವರಿದು ಆಧುನಿಕ ನಾಗರಿಕತೆಯನ್ನು ರೂಪಿಸಿ ಅದರ ಪ್ರಭಾವ ಇಡೀ ಜಗತ್ತನ್ನು ಆವರಿಸುವಂತಾಯಿತು. ಆಧುನಿಕ ನಾಗರಿಕತೆಯ ಬೃಹತ್ ಪ್ರವಾಹದ ಅಲೆಗಳು ಭಾರತವನ್ನು ಅಪ್ಪಳಿಸಿದಾಗ ಇಲ್ಲಿಯ ಸಾಮಾಜಿಕ ಭದ್ರ ಕೋಟೆಗಳು ಪುಡಿಪುಡಿಯಾದವು. ಈಗ ನಮ್ಮ ಸಮಾಜ ಮುಕ್ತವಾಗುತ್ತಿದೆ. ಈ ಹೊಸ ಸನ್ನಿವೇಶವನ್ನು ಸರಿಯಾದ ರೀತಿಯಲ್ಲಿ ಎದುರಿಸಲು ನಮ್ಮಲ್ಲಿ ಸೂಕ್ತವಾದ ಸಾಮಾಜಿಕ ನೀತಿ ಇಲ್ಲದಿದ್ದುದರಿಂದ ಅನೀತಿ, ಅತ್ಯಾಚಾರ, ಭ್ರಷ್ಟಾಚಾರ ಮುಂತಾದ ವಿಷಸರ್ಪಗಳು ಹೆಡೆಯೆತ್ತುತ್ತಿವೆ. ಈಗ ಅತ್ಯಂತ ತುರ್ತಾಗಿ ಬೇಕಾಗಿರುವುದು ಆಧುನಿಕ ನಾಗರಿಕತೆಗೆ ಹೊಂದಿಕೆಯಾಗುವ, ವೈಯಕ್ತಿಕ ಹಿತ ಮತ್ತು ಸಾಮಾಜಿಕ ಹಿತ ಎರಡನ್ನೂ ಸಮನ್ವಯಗೊಳಿಸುವ ಹೊಸ ಸಾಮಾಜಿಕ ನೀತಿ. ಈ ಹೊಸ ನೀತಿಯನ್ನು ಸ್ವಾಮಿ ವಿವೇಕಾನಂದರು ಒಂದು ಆಧುನಿಕ ಮಂತ್ರದ ರೂಪದಲ್ಲಿ ನಮಗೆ ನೀಡಿರುವರು : *ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ* — ವ್ಯಕ್ತಿಯ ಆಧ್ಯಾತ್ಮಿಕ ಉನ್ನತಿ ಮತ್ತು ಜಗತ್ತಿನ ಹಿತ.

ವ್ಯಕ್ತಿಯು ತನ್ನ ನೈತಿಕ ಮತ್ತು ಆಧ್ಯಾತ್ಮಿಕ ಪರಿಪೂರ್ಣತೆಗಾಗಿ ಸಾಧನೆ ಮಾಡಬೇಕು, ಇದು ಸ್ವಕೇಂದ್ರಿತ ಜೀವನ. ಇದರ ಜೊತೆಗೆ ಜಗತ್ತಿನ ಅಥವಾ ಸಮಾಜದ ಹಿತಕ್ಕಾಗಿಯೂ ಶ್ರಮಿಸಬೇಕು. ಇದು ಪರಕೇಂದ್ರಿತ ಜೀವನ. ಈ ಎರಡು ಆದರ್ಶಗಳ ಸಮನ್ವಯ ಇಂದು ಅತ್ಯಂತ ಆವಶ್ಯಕ. ವೈಯಕ್ತಿಕ ಪರಿಪೂರ್ಣತೆಯನ್ನು ಕಡೆಗಣಿಸಿ ಜಗದ್ಧಿತವನ್ನು ಸಾಧಿಸುವುದೂ ಜಗದ್ಧಿತವನ್ನು ಕಡೆಗಣಿಸಿ ಕೇವಲ ವೈಯಕ್ತಿಕ ಪರಿಪೂರ್ಣತೆಗಾಗಿ ಶ್ರಮಿಸುವುದೂ ಸರಿಯಲ್ಲ. ಇವೆರಡೂ ಪರಸ್ಪರ ಪೂರಕಗಳಾಗಬೇಕು.